ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಕಲಘಟಗಿ

**ಸಿ.ಸಿ ನಂ.1762-2022**

| | | |
|---|---|---|
| ಪಿರ್ಯಾದಿದಾರರು | | ಕರ್ನಾಟಕ ಸರಕಾರದ ಪರವಾಗಿ<br>ಕಲಘಟಗಿ ಪೋಲಿಸ ಠಾಣೆ. |

ವಿರುದ್ಧ

| | | |
|---|---|---|
| ಆಪಾದಿತ | 4 | ಪೀರಸಾಬ ತಂದೆಃ ಗಜಬೀರಸಾಬ ಗಡ್ಡದವರ<br>ವಯಾಃ 57 ವರ್ಷ, ಉಃ ಶೇತ್ಕಿ<br>ಸಾಃ ಸಿಂಗ್ನಳ್ಳಿ |

ಆರೋಪಣೆ

ಶ್ರೀ ಜಿ. ಆರ್ ಶೆಟ್ಟರ ಬಿ ಕಾಂ ಎಲ್ ಎಲ್ ಬಿ (ಸ್ಪೇಷಲ್) ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ಗಳು ಕಲಘಟಗಿ ಆದ ನಾನು ನಿಮ್ಮ ಮೇಲೆ ಹೊರಿಸುವ ಆಪಾದನೆ ಈ ಕೆಳಗಿನಂತಿದೆ.

ಕಲಘಟಗಿ ಪೋಲಿಸ ಠಾಣಾ ವ್ಯಾಪ್ತಿಯ ಲಿಂಗನಕೊಪ್ಪ ರಿಸರ್ವ ಫಾರೆಸ್ಟ ಅರಣ್ಯ ಸರ್ವೇ ನಂ. 40 ಬ್ಲಾಕ ನಂ.1 ಕೂಪ ನಂ.36 ರಲ್ಲಿ ದಿನಾಂಕಃ 13-06-1986 ರಂದು ಮುಂಜಾನೆ 5-15 ಗಂಟೆಯ ಸಮಯದಲ್ಲಿ ಆಪಾದಿತರು ಪಾಸ್ ವ ಪರ್ಮಿಟ್ ಇಲ್ಲದೇ ಅಕ್ರಮವಾಗಿ ರೂ2425-00 ಬೆಲೆ ಬಾಳುವ ಶ್ರೀಗಂಧದ ಬುಡಕಿಗಳನ್ನು ಎಬ್ಬಿಸಿ ಕಳುವು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379 ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಮತ್ತು 87 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಎರಡನೆಯದಾಗಿ ಮೇಲಿದ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆಪಾದಿತರಾದ ನೀವುಗಳು ಆ ರೀತಿ ಸರ್ಕಾರದ ಕಾಯ್ದಿಟ್ಟ ಅರಣ್ಯದಲ್ಲಿ ಪಾಸ್ ಪರವಾನಿಗೆ ಇಲ್ಲದೇ ಅಕ್ರಮವಾಗಿ ಬುಡಕಿಗಳನ್ನು ಎಬ್ಬಿಸಿ ಕಳುವು ಮಾಡಿದ್ದಲದೇ ಕಳುವು ಮಾಡಲೆಂದು ಗೊತ್ತಿದ್ದೂ ನಿಮ್ಮ ನಿಮ್ಮ ವಶದಲ್ಲಿ ಅವುಗಳನ್ನು ಇಟ್ಟುಕೊಂಡು ಸಿಕ್ಕಿ ಬಿದ್ದದ್ದು.

ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 379 ಕರ್ನಾಟಕ ಅರಣ್ಯ ಕಾಯ್ದೆ ಕಲಂ 86 ಮತ್ತು 87 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಪ್ರಶ್ನೆ:1) ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯತೇ?

4 ನೇ ಆಪಾದಿತನ ಉತ್ತರಃ

ಪ್ರಶ್ನೆ:2 ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೊ?

4 ನೇ ಆಪಾದಿತನ ಉತ್ತರಃ

(4 ನೇ ಆಪಾದಿತನಿಗೆ ಆಪಾದನೆಯನ್ನು ಓದಿ ತಿಳಿಸಿ ನಂತರ ಆಪಾದಿತನ ಉತ್ತರವನ್ನು ಪಡೆಯಲಾಗಿದೆ.)

ಸ್ಥಳಃ ಕಲಘಟಗಿ

ದಿನಾಂಕಃ 02-03-2023

C/c. ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳು
ಕಲಘಟಗಿ.